ಅ) ಬೆಳ್ತಂಗಡಿ ತಾಲ್ಲೂಕು ಪ್ರದೇಶವನ್ನು ಹಿಂದೆ ಬೂದು ಪ್ರದೇಶವೆಂದು ಘೋಷಿಸಿದ್ದು, ಈಗ ಬಿಳಿ ಪ್ರದೇಶವೆಂದು ಘೋಷಿಸಿರುವುದು ನಿಜವಲ್ಲವೇ;

ಆ) ಬೂದು ಪ್ರದೇಶವೆಂದು ಘೋಷಿಸಿದ್ದಲ್ಲಿ, ವಿದ್ಯುತ್ ಸಂಪರ್ಕಕ್ಕಾಗಿ ಕೊಳವೆ ಅಥವಾ ತೆರೆದ ಬಾವಿಗಳಿಗೆ ಇದ್ದ ನಿರ್ಬಂಧವನ್ನು ತೆಗೆದು ಹಾಕಲಾಗಿದೆಯೇ;

ಇ) ಹಾಗಿದ್ದಲ್ಲಿ, ವಿದ್ಯುತ್ ಸಂಪರ್ಕವನ್ನು ನೀಡುವಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

ಅ) ಇಲ್ಲ.

ಬೆಳ್ತಂಗಡಿ ತಾಲ್ಲೂಕನ್ನು 1994ರ ಅಂತ್ಯಕ್ಕೆ ಅಂತರ್ಜಲ ಮೌಲೀಕರಣ ಮಾಡಿ ವರದಿಯನ್ನು ಪ್ರಕಟಪಡಿಸಿದ ಪ್ರಕಾರ, ಆ ತಾಲ್ಲೂಕನ್ನು 'ಬೂದು' ಪ್ರದೇಶವೆಂದು ಘೋಷಿಸಿರುವುದು ಪ್ರಸ್ತುತದವರೆಗೆ ಜಾರಿಯಲ್ಲಿರುತ್ತದೆ. ಆದರೆ, 1999ರ ಅಂತ್ಯಕ್ಕೆ ಮೌಲೀಕರಣ ಮಾಡಿ ವರದಿಯನ್ನು ತಯಾರಿಸಲಾಗುತ್ತಿದೆ. ಮೌಲೀಕರಣ ಮಾಡಿದ ಅಂಕಿ ಅಂಶಗಳ ವಿವರಗಳ ಪ್ರಕಾರ, ಬೆಳ್ತಂಗಡಿ ತಾಲ್ಲೂಕು 'ಬೂದು' ಪ್ರದೇಶವೆಂದು ವರ್ಗೀಕರಣ ಮಾಡಿರುವ ಪಟ್ಟಿಯಿಂದ ತೆರವಾಗುವ ಸಂಭವವಿದೆ ಎಂದು ತಿಳಿದು ಬಂದಿದೆ.

ಆ) ಬೂದು ಪ್ರದೇಶದ ಪಟ್ಟಿಯಿಂದ ತೆರವಾದ ನಂತರ ವಿದ್ಯುತ್ ಸಂಪರ್ಕಕ್ಕಾಗಿ ಇರುವ ನಿರ್ಬಂಧವನ್ನು ತೆಗೆದು ಹಾಕಲಾಗುವುದು.

ಇ) ಈ ಪ್ರದೇಶವು ಬೂದು ವಿನಿಂದ 'ಬಿಳಿ' ಪ್ರದೇಶಕ್ಕೆ ವರ್ಗಾವಣೆಯಾದ ನಂತರ ವಿದ್ಯುತ್ ಸಮಪರ್ಕವನ್ನು ನೀಡಲಾಗುವುದು.

ರಾಜ್ಯದಲ್ಲಿ ಮಂಡಲ್ ಆಯೋಗದ ವರದಿ ಮೇರೆಗೆ ಹಿಂದುಳಿದ ಜಾತಿಗಳ ಸೇರ್ಪಡೆ

4629 (5170) : ಶ್ರೀ ರವೀಂದ್ರನಾಥ್ ಎಸ್.ಎ (ಮಾಯಕೊಂಡ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಂಡಲ್ ಆಯೋಗದ ವರದಿ ಮೇರೆಗೆ ಯಾವ ಯಾವ ಹಿಂದುಳಿದ ಜಾತಿಗಳನ್ನು ಸೇರ್ಪಡೆಗೊಳಿಸಲಾಗಿದೆ; (ಪಟ್ಟಿಲಗತ್ತಿಸುವುದು) ಮತ್ತು ಮಂಡಲ್ ಆಯೋಗದ ಜಾರಿಯ ಆದೇಶ ಪ್ರತಿ ನೀಡುವುದು;

ಆ) ಸದರಿ ಪಟ್ಟಿಯಲ್ಲಿಲ್ಲದ ಮತ್ತು ಇನ್ನೂ ಈ ಪಟ್ಟಿಗೆ ಸೇರಿಸಬೇಕಾಗಿರುವ ಬೇರೆ ಜಾತಿ ಅಥವಾ ಪಂಗಡಗಳಿವೆಯೇ; (ಜಿಲ್ಲಾವಾರು ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಯಾವಾಗ ಈ ಸಲಹೆ ಪರಿಗಣಿಸಲಾಗುತ್ತದೆ; (ವಿವರ ಒದಗಿಸುವುದು);

ಈ) ಈ ನಿಟ್ಟಿನಲ್ಲಿ ಮೀಸಲಾತಿ ಪ್ರಮಾಣ ಎಷ್ಟು ಒದಗಿಸಲಾಗಿದೆ; ಉದ್ಯೋಗಕ್ಕೆ ವ್ಯಾಸಂಗಕ್ಕೆ ಪ್ರತ್ಯೇಕವಾದ ಶೇಕಡಾವಾರು ಅಂಕಿಅಂಶ ವಿವರ ಒದಗಿಸುವುದು;

ಉ) ಹಿಂದುಳಿದ ವರ್ಗ ಪಂಗಡಗಳ ಪ್ರವರ್ಗ 2ಎದಲ್ಲಿ ಬರುವ ಹೆಚ್ಚಿನ ಜನಸಂಖ್ಯೆಯುಳ್ಳ ಬಸವ ಸಮುದಾಯದವರ ಮಧ್ಯೆ ಅತ್ಯಲ್ಪ ಪ್ರಮಾಣದ (ಕಡಿಮೆ ಜನಸಂಖ್ಯೆ ಹೊಂದಿದ) ಜಾತಿಗಳವರು ಮೀಸಲಾತಿಗೆ ಸ್ಪರ್ಧೆ ಮಾಡಲು ಸಾಧ್ಯವೇ;

ಊ) ಇದು ಸಾಮಾಜಿಕ ಸಮಾನತೆ ನ್ಯಾಯಕ್ಕೆ ವ್ಯತಿರಿಕ್ತವಾಗುವುದಿಲ್ಲವೇ; ಈ ತಾರತಮ್ಯ ನೀತಿಯನ್ನು ಸರಿಪಡಿಸಲು ಕೈಗೊಳ್ಳುವ ಮಾರ್ಗೋಪಾಯಗಳೇನು, ವಿವರಿಸುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಮಂಡಲ್ ಆಯೋಗದ ವರದಿಯನ್ವಯ 166 ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿ ಕೇಂದ್ರ ಸರ್ಕಾರವು ಆದೇಶ ಹೊರಡಿಸಿರುತ್ತದೆ. (ಕೇಂದ್ರ ಸರ್ಕಾರದ ದಿನಾಂಕ: 10.09.1993ರ ಆದೇಶದ ಪ್ರತಿಯನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ).

ಆ) ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇರುವ ಜಾತಿಗಳಲ್ಲಿ 73 ಜಾತಿಗಳು ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇರುವುದಿಲ್ಲ. ಪಟ್ಟಿಯನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ. ಜಿಲ್ಲಾವಾರು ವಿವರಗಳು ಲಭ್ಯವಿರುವುದಿಲ್ಲ.

ಇ) ಇಂತಹ ಜಾತಿಗಳವರಿಂದ ಮನವಿಗಳು ಸ್ವೀಕೃತವಾದಾಗ ರಾಜ್ಯ ಸರ್ಕಾರವು ಸದರಿ ಮನವಿಗಳನ್ನು ಪರಿಶೀಲಿಸಿ, ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

ಈ) ಕೇಂದ್ರ ಸರ್ಕಾರವು ಹಿಂದುಳಿದ ವರ್ಗದವರಿಗೆ ಉದ್ಯೋಗಗಳಲ್ಲಿ ಶೇಕಡಾ 27ರಷ್ಟು ಮೀಸಲಾತಿಯನ್ನು ನೀಡಿರುತ್ತದೆ. ರಾಜ್ಯ ಸರ್ಕಾರವು ಹಿಂದುಳಿದ ವರ್ಗದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇಕಡ 32ರಷ್ಟು ಮೀಸಲಾತಿಯನ್ನು ಒದಗಿಸಿರುತ್ತದೆ.

ಉ) ಮೀಸಲಾತಿಯನ್ನು ಉದ್ಯೋಗ ಮತ್ತು ಶೈಕ್ಷಣಿಕ ಉದ್ದೇಶಕ್ಕಾಗಿ ಸ್ಪರ್ಧಾತ್ಮಕ ಆಧಾರದ ಮೇಲೆ ಆಯಾ ಪ್ರವರ್ಗದ ಜಾತಿಗಳಿಗೆ ನೀಡಲಾಗುತ್ತಿದೆ. ಹಾಗೆ ನೀಡುವಾಗ ಅಭ್ಯರ್ಥಿಯ ಮೆರಿಟ್ ಅನ್ನು ಮಾತ್ರ ಪರಿಗಣಿಸಲಾಗುತ್ತಿರುವ ಕಾರಣ ಆಯಾ ಜಾತಿಯ ಸದಸ್ಯರ ಸಂಖ್ಯೆ ಪರಿಣಾಮ ಬೀರುವುದಿಲ್ಲ.

ಊ) ದಲ್ಲಿ ತಿಳಿಸಲಾದ ಅಭಿಪ್ರಾಯದಂತೆ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE

List of main castes in the State list which do no find place in the Central OBC

1.	Agamudi	I-I
2.	Ammakodava	II(a)80
3.	Annappan	II(a) 81
4.	Andi	II(a) 82
5.	Aryan	II(a) 97
6.	Ambalakaran	I(a)
7.	Bavandhi	I(3)
8.	Banjari	I(a)81
9.	Bandar	I(a) 82
10.	Bhoi	I(a) 87
11.	Buddhists	II(a) 22(a)7

1	2	3
12.	Baandhi	2(a) 22(a)
13.	Bavaji	I(a)4
14.	Binapatta	II(a)20
15.	Bagaḍi	II(a)22(c)
16.	Boger	II(a)44
17.	Ballala	II(a) 84(b)
18.	Bhatial	II(a) 85(a)
19.	Bestha	I(a)
20.	Bunt/Bant	II(b) 4(a)
21.	Budududuki	I(a) 9
22.	Chakkan	II(A) 86
23.	Christain	III(b)3
24.	Dasari	I(a) 11
25.	Doria	I(57)
26.	Dogka	II(a) 87
27.	Davadasi	I(a)12
28.	Davari	I(83)
29.	Fullmali	I(75)
30.	Gurkha	I(16)
31.	Garudi	I(a)84
32.	Girni waddar	I(a)86
33.	Goravi	II(a) 31(a)
34.	Gavandi	II(a) 69(a)
35.	Gulli	II(a) 88
36.	Havadiga	I(a)18(a)
37.	Hangar	II(a) 38(a)
38.	Hindu sadru/Sadaru	II(a) 89
39.	Jatti/Jetty	II(a) 90(a)
40.	Jains (Digambar)	II(b)5
41.	Katabar	I(22) (a)
42.	Karikudumbi	II(a) 41
43.	Kodagaru	III(a) 2

1	2	3
44.	Katik	II(a) 23(a)
45.	Kuruba	II(a) 5(a)
46.	Khatik	II(a) 43(a)
47.	Kalavanthi	II(a) 91(a)
48.	Kanakan	II(a) 92(a)
49.	Kolari	I(24)(a)
50.	Kotegara	II(a) 93(a)
51.	Kshatriya/kshatri	II(a)
52.	Mudhar	I(32)
53.	Modikara	I(65) (a)
54.	Mestha	II(a) 26
55.	Malawa	II(a) 95
56.	Maliya	II(a) 96
57.	Muslim	II(b) 1
58.	Maratha	III(b)2(a)
59.	Pangual	I(35)(a)
60.	Paradhis	I(85)
61.	Pinjara	I (88)
62.	Pinjle	II(a) 30
63.	Raya Rawath	I(37)(a)
64.	Raju kshatriya	II(a) 98a
65.	Somavamsa/Arya	II(a) 43a
66.	Somavamshakshatriya	II(a) 99
67.	Stanika	II(a) 100
68.	Towar	I(40)a
69.	Tulu	II(a) 101(a)
70.	Veer	I(50)a
71.	Vogri	I(67)
72.	Veershaiva Lingayath	III(b) 1(a)
73.	Yerkala	1(52) (a)